



# ಕಾನ್ಪುರ ಕಿವಿಯೋಲೆ ಮಿಂಚುವಳು ಬಾಲೆ

ಹಬ್ಬ ಹರಿದಿನ, ಶುಭ ಸಮಾರಂಭಗಳಲ್ಲಿ ರೇಷ್ಮೆ ಸೀರೆ ಉಟ್ಟಾಗ ಚಂದದ ಕಿವಿಯೋಲೆ ಧರಿಸಬೇಕು. ಕಿವಿ ತುಂಬ ಕಾಣುವ 'ಕಾನ್ಪುರ ಕಿವಿಯೋಲೆ' ಬಂದಿದ್ದು ಫ್ಯಾಷನ್ ಟ್ರೆಂಡ್ ಆಗಿದೆ.

■ ಕವಿತಾ ವಿನು ಭಟ್ಟ

ಕಿವಿಯೋಲೆಗಳಲ್ಲಿ ಹಲವು ಬಗೆ. ಮದುವೆ, ಮುಂಜಿ, ಗೃಹಪ್ರವೇಶ ಮುಂತಾದ ಶುಭ ಸಮಾರಂಭಗಳಿಗೆ ಹೋಗುವಾಗ ಜುಮುಕಿಗಳಂತಹ ದೊಡ್ಡ ದೊಡ್ಡ ಕಿವಿಯೋಲೆ ಸೂಕ್ತ. ನಿತ್ಯ ಕಚೇರಿಗೆ, ಶಾಲಾ ಕಾಲೇಜಿಗೆ ಹೋಗುವವರಿಗೆ ಸಣ್ಣದಾದ ಸ್ಟೈಲಿಷ್ ಕಿವಿಯೋಲೆ ಒಪ್ಪುತ್ತದೆ. ಈಗಂತೂ ಕಿವಿಯೋಲೆಗಳಲ್ಲಿ ವೈವಿಧ್ಯಮಯ ವಿನ್ಯಾಸದವು ಮಾರುಕಟ್ಟೆಗೆ ಬಂದಿವೆ.

ಅಂದ ಹಾಗೆ, ಯಾವುದೇ ಆಭರಣ ಇಲ್ಲದಿದ್ದರೂ ನಡೆದೀತು, ಆದರೆ ಕಿವಿಯೋಲೆ ಮಾತ್ರ ಬೇಕೆ ಬೇಕು ಎಂಬುದು ಕೆಲ ಮಹಿಳೆಯರ ಅಭಿಮತ. ಕಿವಿಗೆ ಓಲೆ ಇದ್ದರೆ ಅದೊಂಥರ ಖುಷಿ ಮತ್ತು ಸಮಾಧಾನ. ಮೂಗುತಿ, ಕಿವಿಯೋಲೆಗಳಿಗೆಂದೇ ಚುಚ್ಚಿಸಿಕೊಳ್ಳುತ್ತಿದ್ದ ಕಾಲ ಮುಗಿದು ಇದೀಗ ಚುಚ್ಚದೇ ಧರಿಸುವ ಆಭರಣಗಳ ಹೊಸ ಟ್ರೆಂಡ್ ಶುರುವಾಗಿದೆ. ಅದನ್ನೇ ಇಯರ್ ಕಫ್ ಮತ್ತು ಇಯರ್ ಕ್ಲಿಪ್ ಎನ್ನಲಾಗುತ್ತದೆ.

ಇದೀಗ ಹಬ್ಬಹರಿದಿನ, ಮದುವೆ, ಫಂಕ್ಷನ್‌ಗಳಿಗೆಂದು ಭಾರವಾದ ಒಡವೆ ತೊಡುವ ಅಭ್ಯಾಸ ಶುರುವಾಗಿದೆ. ಭಾರದ ಆ್ಯಂಟಿಕ್ ಆಭರಣಗಳ ಸಾಲಿನಲ್ಲಿ ಪೂರ್ತಿ ಕಿವಿ ಮುಚ್ಚುವ ಈ ಕಾನ್ಪುರ ಕಿವಿಯೋಲೆ ಆಧುನಿಕ ಮನೋಭಾವದ ಮಹಿಳೆಯರ ಹಾಟ್ ಫೇವರೇಟ್ ಎನಿಸಿದೆ.

ಏನಿದು ಕಾನ್ಪುರ ಕಿವಿಯೋಲೆ?

ಕಾನ್ಪುರ ಎನ್ನುವುದು ಹಿಂದಿ ಶಬ್ದ. ಕಿವಿಯನ್ನು ಪೂರ್ತಿ ಆವರಿಸಿಕೊಳ್ಳುವ ಓಲೆಯೇ ಕಾನ್ಪುರ ಓಲೆ. ಇಂಗ್ಲಿಷ್‌ನಲ್ಲಿ ಇಯರ್ ಕಫ್ ಎಂದು ನಾಮಾಂಕಿತಗೊಂಡು ಜನಪ್ರಿಯವಾಗಿದೆ. ಕಿವಿ ಚುಚ್ಚಿಸಿಕೊಳ್ಳದೇ ಧರಿಸಬಹುದಾದ ಆ್ಯಂಟಿಕ್ ಓಲೆ ಇದು. ಈ ಓಲೆಯನ್ನು ಧರಿಸಿ ಕಿವಿಯ ಮೇಲ್ಭಾಗದಲ್ಲಿ ಪಿನ್ ಮಾಡಿದರಾಯಿತು. ಇತ್ತೀಚಿನ ದಿನಗಳಲ್ಲಿ ಕಾಲೇಜು ಹುಡುಗಿಯರು ಇದನ್ನು ಹೆಚ್ಚಾಗಿ ಇಷ್ಟಪಡುತ್ತಿದ್ದಾರೆ.

